## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 803
ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 25-09-2020.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಗ್ರಾಮ ಪಂಚಾಯತ್ ಸದಸ್ಯರ ಅವಧಿ ಮುಗಿದಿದ್ದು, ಮರು ಚುನಾವಣೆಗಳು ನಡೆಯಬೇಕಾಗಿದ್ದು, ಈ ಬಗ್ಗೆ ಸರ್ಕಾರ ನಿಲುವೇನು; | ರಾಜ್ಯ ಚುನಾವಣಾ ಆಯೋಗವು ಅವಧಿ ಮುಕ್ತಾಯವಾಗುವ ಗ್ರಾಮ ಪಂಚಾಯತಿಗಳಿಗೆ ಚುನಾವಣೆ ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. |
| (ಆ) | ಸದರಿ ಪಂಚಾಯತ್ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು; | ಪ್ರಸ್ತುತ ಕೋವಿಡ್ ಹಿನ್ನೆಲೆಯಲ್ಲಿ ಚುನಾವಣೆ ನಡೆಸುವ ಬಗ್ಗೆ ಸೂಕ್ತ ಸಮಯದಲ್ಲಿ ತೀರ್ಮಾನಿಸಿ ಚುನಾವಣೆಯನ್ನು ಘೋಷಿಸಲಾಗುವುದು. |
| (ಇ) | ಕೋವಿಡ್-19 ಗ್ರಾಮೀಣ ಪ್ರದೇಶಗಳಲ್ಲಿ ಹರಡಿದ್ದು ಚುನಾವಣೆಯನ್ನು ಹೇಗೆ ನಡೆಸಲಾಗುವುದು ಯಾವ ತರಹದ ಸುರಕ್ಷತಾ ಕ್ರಮಗಳನ್ನು ಕೈಗೊಂಡ ಚುನಾವಣೆ ನಡೆಸಲಾಗುತ್ತದೆ? (ವಿವರ ನೀಡುವುದು) | ರಾಜ್ಯ ಚುನಾವಣಾ ಆಯೋಗವು ಪ್ರಸ್ತುತ ಕೋವಿಡ್-19 ರ ಹಿನ್ನೆಲೆಯಲ್ಲಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಚುನಾವಣೆ ನಡೆಸುವ ಬಗ್ಗೆ "ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ / ಉಪ ಚುನಾವಣೆ ನಡೆಸಲು ಅನುಸರಿಸಬೇಕಾದ ಪ್ರಾಮಾಣಿತ ಕಾರ್ಯನಿರ್ವಹಣಾ ಪದ್ಧತಿ (ಎಸ್.ಒ.ಪಿ.)" ಯನ್ನು ತಯಾರಿಸಿದ್ದು ಈ ಬಗ್ಗೆ ದಿನಾಂಕ:15-09-2020 ರಂದು ಪ್ರಕಟಣೆ ಹೊರಡಿಸಲಾಗಿದೆ. ಅದರಂತೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. (ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ.) |

ಸಂ. ಗ್ರಾಅಪ 728 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 803 ಕ್ಕೆ

ಅನುಬಂಧ-1

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

ಸಂಖ್ಯೆ : ರಾಚುಆ : 87 : ಇಜಿಪಿ : 2020

ಕೆ.ಎಸ್.ಸಿ.ಎಂ.ಎಫ್. ಬಿಲ್ಡಿಂಗ್ (ಹಿಂಭಾಗ), ನಂ.8
1ನೇ ಮಹಡಿ, ಕನ್ನಿಂಗ್‌ಹ್ಯಾಂ ರಸ್ತೆ,
ಬೆಂಗಳೂರು-52, ದಿನಾಂಕ: 15.09.2020
ದೂರವಾಣಿ-080-22205189 / 22205193
E.mail: karsec@gmail.com

## ಪತ್ರಿಕಾ ಪ್ರಕಟಣೆ

### ಕೋವಿಡ್-19 ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ / ಉಪ ಚುನಾವಣೆ ನಡೆಸಲು ಅನುಸರಿಸಬೇಕಾದ ಪ್ರಾಮಾಣಿತ ಕಾರ್ಯ ನಿರ್ವಹಣಾ ಪದ್ಧತಿ (ಎಸ್.ಒ.ಪಿ).

-0-0-0-

ಮುಂಬರಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಕೋವಿಡ್-19 ಹಿನ್ನೆಲೆಯಲ್ಲಿ ನಡೆಸಬೇಕಾಗಿರುತ್ತದೆ. ಕೇಂದ್ರ ಗೃಹ ಮಂತ್ರಾಲಯ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕೋವಿಡ್-19 ನಿಯಂತ್ರಣಕ್ಕಾಗಿ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ಅದರಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುವ ನಿಟ್ಟಿನಲ್ಲಿ ಅನುಸರಿಸಬೇಕಾದ ಪದ್ಧತಿಗಳ ಬಗ್ಗೆ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಾಂತ್ರಿಕ ನಿಪುಣರೊಂದಿಗೆ ಆಯೋಗದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ. ಅವರ ಸಲಹೆಗಳನ್ನು ಪರಿಗಣಿಸಿ ರಾಜ್ಯ ಚುನಾವಣಾ ಆಯೋಗವು ಚುನಾವಣೆಯ ಸಂದರ್ಭದಲ್ಲಿ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸಲು ಸ್ಥಳೀಯ ಸಂಸ್ಥೆಗಳ ಚುನಾವಣೆ ಪ್ರಮಾಣಿತ ಕಾರ್ಯನಿರ್ವಾಹಣಾ ಪದ್ಧತಿ (ಎಸ್.ಒ.ಪಿ) ಮಾರ್ಗಸೂಚಿಯನ್ನು ರಚಿಸಿರುತ್ತದೆ.

ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಅಭ್ಯರ್ಥಿಗಳು ಗರಿಷ್ಟ 5 ಜನ ಬೆಂಬಲಿಗರೊಂದಿಗೆ ಸಾಮಾಜಿಕ ಅಂತರ ಕಾಯ್ದುಕೊಂಡು ಪ್ರಚಾರ ಮಾಡಬಹುದಾಗಿರುತ್ತದೆ. ಕೋವಿಡ್ ಸೋಂಕಿತ ವ್ಯಕ್ತಿಗಳು ಮತಚಲಾಯಿಸಲು ಹಕ್ಕುಳ್ಳವರಾಗಿದ್ದು ಇವರಿಗೆ ಅಂಚೆ ಮತಪತ್ರಗಳ ಮೂಲಕ ಮತಚಲಾಯಿಸಲು ಅವಕಾಶ ಕಲ್ಪಿಸಲಾಗುತ್ತದೆ. ಚುನಾವಣಾ ಕಾರ್ಯದಲ್ಲಿ ನಿರತರಾಗುವ ಎಲ್ಲಾ ಅಧಿಕಾರಿ ಸಿಬ್ಬಂದಿಯವರು ಅವಶ್ಯಕ ಸಾಮಗ್ರಿಗಳಾದ ಫೇಸ್ ಮಾಸ್ಕ, ಸ್ಯಾನಿಟೈಸರ್, ಥರ್ಮಲ್ ಸ್ಕ್ಯಾನರ್ ಇತ್ಯಾದಿಗಳನ್ನು ಉಪಯೋಗಿಸಿಕೊಂಡು ಕೋವಿಡ್ ಮಾರ್ಗಸೂಚಿಯನ್ನು ಅನುಸರಿಸಿ ಚುನಾವಣೆ ನಡೆಸಲು ಅನುಕೂಲ ಕಲ್ಪಿಸಲಾಗುತ್ತದೆ. ಈ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಇದರೊಂದಿಗೆ ಲಗತ್ತಿಸಿರುವ ಪ್ರಮಾಣಿತ ಕಾರ್ಯನಿರ್ವಾಹಣಾ ಪದ್ಧತಿ (ಎಸ್.ಒ.ಪಿ)ಯನ್ನು ಮುಂಬರಲಿರುವ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು, ಮತದಾರರು ಹಾಗೂ ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಕಟಿಸಿದೆ.

15/09/2020
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

ಗೆ,

1. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು-ಇವರಿಗೆ ಕಳುಹಿಸಿ ಪತ್ರಿಕಾ ಪ್ರಕಟಣೆಯನ್ನು ಸುದ್ಧಿಮಾಧ್ಯಮದಲ್ಲಿ ಸರ್ಕಾರಕ್ಕೆ ವೆಚ್ಚ ತಗುಲದಂತೆ ಪ್ರಕಟಿಸಲು ಕೋರಿದೆ.
2. ಸಂಪಾದಕರು/ವ್ಯವಸ್ಥಾಪಕರು ದಿನಪತ್ರಿಕೆಗಳು, ದೂರದರ್ಶನ ಕೇಂದ್ರಗಳಿಗೆ ಕಳುಹಿಸಿ ಮೇಲ್ಕಂಡ ಪ್ರಕಟಣೆಯನ್ನು ಸುದ್ದಿಮಾಧ್ಯಮದಲ್ಲಿ ಪ್ರಕಟಿಸುವಂತೆ ವಿನಂತಿಸಿದೆ.

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಕೆ.ಎಸ್.ಸಿ.ಎಂ.ಎಫ್. ಬಿಲ್ಡಿಂಗ್ (ಹಿಂಭಾಗ), ನಂ.8, 1ನೇ ಮಹಡಿ, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು –52.

ನಂ. ರಾಚುಆ:87:ಇಜಿಪಿ:2020 ದಿನಾಂಕ: 14.09.2020

### ಕೋವಿಡ್–19 ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ / ಉಪ ಚುನಾವಣೆ ನಡೆಸಲು ಅನುಸರಿಸಬೇಕಾದ ಪ್ರಾಮಾಣಿತ ಕಾರ್ಯ ನಿರ್ವಹಣಾ ಪದ್ಧತಿ (ಎಸ್.ಓ.ಪಿ),

ಕೇಂದ್ರ ಗೃಹ ಮಂತ್ರಾಲಯ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕೋವಿಡ್–19 ನಿಯಂತ್ರಣಕ್ಕಾಗಿ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ಅದರಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುವ ನಿಟ್ಟಿನಲ್ಲಿ ಅನುಸರಿಸಬೇಕಾದ ಪದ್ಧತಿಗಳ ಬಗ್ಗೆ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಾಂತ್ರಿಕ ನಿಪುಣರೊಂದಿಗೆ ದಿನಾಂಕ:12–08–2020 ರಂದು ಆಯೋಗದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ. ಅವರ ಸಲಹೆಗಳನ್ನು ಪರಿಗಣಿಸಿ ರಾಜ್ಯ ಚುನಾವಣಾ ಆಯೋಗವು ಚುನಾವಣೆಯ ಸಂದರ್ಭದಲ್ಲಿ ಮುನೆಚ್ಚರಿಕೆಯ ಕ್ರಮಗಳನ್ನು ಅನುಸರಿಸಲು ಈ ಕೆಳಕಂಡ ಪ್ರಮಾಣಿತ ಕಾರ್ಯನಿರ್ವಾಹಣಾ ಪದ್ಧತಿ (ಎಸ್.ಓ.ಪಿ) ಯನ್ನು ರಚಿಸಿರುತ್ತದೆ.

**1. ಸಾಮಾನ್ಯ ಮಾರ್ಗಸೂಚಿಗಳು :**

1. ಚುನಾವಣೆಯಲ್ಲಿ ನಿರತರಾಗಿರುವ ಪ್ರತಿಯೊಬ್ಬರು ಫೇಸ್ ಮಾಸ್ಕ್ ಧರಿಸುವುದು ಕಡ್ಡಾವಾಗಿರುತ್ತದೆ.
2. ಚುನಾವಣಾ ಕಾರ್ಯಕ್ಕೆ ಉಪಯೋಗಿಸುವಂತಹ ಕೊಠಡಿಯನ್ನು ಪ್ರವೇಶಿಸುವ ಮೊದಲು ಪತ್ರಿಯೊಬ್ಬರು ಕೈಗಳನ್ನು ಸ್ಯಾನಿಟೈಸರ್ ಶುಚಿಗೊಳಿಸಿಕೊಳ್ಳುವುದು ಹಾಗೂ ಥರ್ಮಲ್ ಸ್ಕ್ಯಾನರ್‌ನಿಂದ ಪರೀಕ್ಷಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
3. ಪ್ರತಿ ಹಂತದಲ್ಲೂ ರಾಜ್ಯ ಸರ್ಕಾರವು ಹೊರಡಿಸುವ ಕೋವಿಡ್–19 ರ ನಿಯಂತ್ರಣದ ಮಾರ್ಗಸೂಚಿಗಳನ್ವಯ ಪ್ರತಿಯೊಬ್ಬರು ಭೌತಿಕ ಅಂತರವನ್ನು ಕಾಯ್ದುಕೊಳ್ಳುವುದು.
4. ಚುನಾವಣಾ ಕಾರ್ಯಗಳನ್ನು ಸಾಧ್ಯವಾದಷ್ಟು ವಿಶಾಲವಾದ ಕೊಠಡಿಗಳಲ್ಲಿ ನಿರ್ವಹಿಸುವುದು.

**2. ಚುನಾವಣಾ ದಾಸ್ತಾನು ಕೊಠಡಿ:**

1) ಚುನಾವಣೆಗೆ ಸಂಬಂಧಿಸಿದ ಫಾರಂಗಳು, ಕವರ್‌ಗಳು ಇತ್ಯದಿ ಚುನಾವಣಾ ಸಾಮಗ್ರಿಗಳನ್ನು disinfect ಮಾಡಿದ ಕೊಠಡಿಯಲ್ಲಿಡಬೇಕು. ಕೊಠಡಿಯನ್ನು ಗೊತ್ತುಪಡಿಸಿದ ಅಧಿಕಾರಿ/ಸಿಬ್ಬಂದಿಗಳು ಮಾತ್ರ ಪ್ರವೇಶಿಸುವಂತಿದ್ದು, ಆ ವ್ಯಕ್ತಿಗಳು ಕೋವಿಡ್–19 ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು.

**3. ಚುನಾವಣಾಧಿಕಾರಿ ಮತ್ತು ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿ ಮತ್ತು ತರಬೇತಿ:**

1) ನೇಮಕಾತಿ ಮಾಡಲಾದ ಚುನಾವಣಾಧಿಕಾರಿಗಳಿಗೆ ಮತ್ತು ಸಹಾಯಕ ಚುನಾವಣಾಧಿಕಾರಿಗಳಿಗೆ ಮತ್ತು ಮೀಸಲು ಚುನಾವಣಾಧಿಕಾರಿಗಳಿಗೆ ಒಂದೇ ಬಾರಿಗೆ ತರಬೇತಿ ನೀಡದೆ ತಂಡಗಳನ್ನು ರಚಿಸಿ ಪ್ರತ್ಯೇಕವಾಗಿ ತರಬೇತಿ ನೀಡುವುದು. ಸಾಧ್ಯವಿದ್ದಲ್ಲಿ App/VC/PPT/Vidioclips ಮೂಲಕ ತರಬೇತಿ ನೀಡುವುದು.

4. ನಾಮಪತ್ರ ಸ್ವೀಕೃತಿ ಸಂದರ್ಭದಲ್ಲಿ ಚುನಾವಣಾಧಿಕಾರಿಗಳ ಕಾರ್ಯ ನಿರ್ವಹಣೆ:
ಚುನಾವಣಾಧಿಕಾರಿಗಳು ಚುನಾವಣಾ ಕೆಲಸಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಕೋವಿಡ್-19 ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

1) ಚುನಾವಣಾಧಿಕಾರಿಗಳು, ನಾಮ ಪತ್ರವನ್ನು ಸ್ವೀಕರಿಸುವ ಸಂದರ್ಭದಲ್ಲಿ ತಮ್ಮ ಕೈಗಳನ್ನು ಸ್ಯಾನಿಟೈಸರ್‌ನಿಂದ ಶುಚಿಗೊಳಿಸಿಕೊಂಡು ಮುಖಕ್ಕೆ ಫೇಸ್ ಮಾಸ್ಕ್ ಹಾಗೂ ಕೈಗಳಿಗೆ ಗ್ಲೌಸ್‌ಗಳನ್ನು ಖಡ್ಡಾಯವಾಗಿ ಧರಿಸಿರಬೇಕು.
2) ನಾಮಪತ್ರವನ್ನು ಸಲ್ಲಿಸುವ ಅಭ್ಯರ್ಥಿಗಳು ಅಥವಾ ಅವರ ಒಬ್ಬ ಸೂಚಕನ ಮೂಲಕ ಮಾತ್ರ ನಿಗದಿತ ಸಮಯದೊಳಗೆ ಚುನಾವಣಾಧಿಕಾರಿಗಳ ಕೊಠಡಿಯ ಹೊರಭಾಗದ ವಿಶಾಲವಾದ ಹಾಲ್‌ನಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು (ಎರಡು ಮೀಟರ್/ 6 ಅಡಿ) ಆಸೀನರಾಗಬೇಕು. ನಾಮಪತ್ರವನ್ನು ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿ ಅಥವಾ ಅವನ ಒಬ್ಬ ಸೂಚಕನನ್ನು ಮಾತ್ರ ಚುನಾವಣಾಧಿಕಾರಿಯ ಕೊಠಡಿಯೊಳಗೆ ಪ್ರವೇಶಿಸಲು ಅನುಮತಿಸಬೇಕು. ಮೊದಲಿನ ವ್ಯಕ್ತಿ/ಅಭ್ಯರ್ಥಿ ನಾಮಪತ್ರ ಸಲ್ಲಿಸಿ ಹೊರಬಂದನಂತರವೇ ಮುಂದಿನ ಅಭ್ಯರ್ಥಿ ಒಳಪ್ರವೇಶಿಸಬೇಕು. ಮೊದಲು ಬಂದವರಿಗೆ ಮೊದಲ ಆಧ್ಯತೆಯಂತೆ ನಿಗದಿತ ಸಮಯದೊಳಗೆ ಹಾಜರಿರುವ ಅಭ್ಯರ್ಥಿಗಳಿಗೆ ಟೋಕನ್ ನೀಡಬೇಕು. ನಾಮಪತ್ರ ಸಲ್ಲಿಸಲು ನಿಗದಿಪಡಿಸಿದ ಸಮಯದನಂತರ ಯಾವುದೇ ಅಭ್ಯರ್ಥಿಗೆ ಅವಕಾಶ ನೀಡತಕ್ಕದ್ದಲ್ಲ. ನಿಗದಿಪಡಿಸಿದ ಸಮಯದ ನಂತರ ನಿಗದಿತ ಸಮಯದೊಳಗೆ ಹಾಜರಿದ್ದು ಟೋಕನ್ ಪಡೆದವರ ನಾಮಪತ್ರಗಳನ್ನು ಮಾತ್ರ ಪಡೆಯಬಹುದಾಗಿರುತ್ತದೆ.
3) ಕೋವಿಡ್-19 ಪಾಸಿಟೀವ್ ಇರುವ ವ್ಯಕ್ತಿಯು ನಾಮಪತ್ರವನ್ನು ಸಲ್ಲಿಸಲು ಇಚ್ಛಿಸಿದಲ್ಲಿ ಅಂತಹ ವ್ಯಕ್ತಿಗಳು ಸೂಚಕರ ಮೂಲಕ ನಾಮ ಪತ್ರ ಸಲ್ಲಿಸುವುದು.
4) ಅಭ್ಯರ್ಥಿಗಳು ತಮ್ಮ ಕೈಗಳನ್ನು ಸ್ಯಾನಿಟೈಸರ್‌ನಿಂದ ಶುಚಿಗೊಳಿಸಿಕೊಂಡಿದ್ದು ಮುಖಕ್ಕೆ ಫೇಸ್ ಮಾಸ್ಕ್ ಧರಿಸುವುದು ಖಡ್ಡಾಯವಾಗಿರುತ್ತದೆ.

5. ನಾಮಪತ್ರಗಳ ಪರಿಶೀಲನೆ: ನಾಮ ಪತ್ರಗಳ ಪರಿಶೀಲನೆಯನ್ನು ಕ್ಷೇತ್ರವಾರು ಹಾಜರಿರುವ ಅಭ್ಯರ್ಥಿಗಳ ಸಮ್ಮುಖದಲ್ಲಿ ಮಾಡಬೇಕು. ಕ್ಷೇತ್ರವಾರು ಪರಿಶೀಲನೆ ಮಾಡುವಾಗ ಆ ಕ್ಷೇತ್ರದ ಅಭ್ಯರ್ಥಿಗಳಿಗೆ ಅಥವಾ ಅವನ ಸೂಚಕರಿಗೆ ಮಾತ್ರ ಪ್ರವೇಶಿಸಲು ಅನುಮತಿಸಬೇಕು. ಅಭ್ಯರ್ಥಿಗಳು ಪ್ರವೇಶಿಸುವ ಮುನ್ನ ತಮ್ಮ ಕೈಗಳನ್ನು ಸ್ಯಾನಿಟೈಸರ್‌ನಿಂದ ಶುಚಿಗೊಳಿಸಿಕೊಂಡಿದ್ದು ಮುಖಕ್ಕೆ ಫೇಸ್ ಮಾಸ್ಕ್ ಧರಿಸುವುದು ಖಡ್ಡಾಯವಾಗಿರುತ್ತದೆ. ಕೊಠಡಿಯಲ್ಲಿ ಸಾಮಾಜಿಕ ಅಂತರ (ಎರಡು ಮೀಟರ್ / 6 ಅಡಿ ಅಂತರದಲ್ಲಿ) ಕಾಯ್ದುಕೊಳ್ಳಬೇಕು. ಸೋಂಕಿತ ಅಭ್ಯರ್ಥಿಯ ಪರವಾಗಿ ಅವರ ಸೂಚಕರು ಮಾತ್ರ ಹಾಜರಾಗುವುದು.
6. ಉಮೇದುವಾರಿಕೆಯನ್ನು ಹಿಂಪಡೆಯುವ ಸಂದರ್ಭದಲ್ಲಿ: ಅಭ್ಯರ್ಥಿ ಅಥವಾ ಅವನ ಸೂಚಕ / ಅಭ್ಯರ್ಥಿ ಅಧಿಕೃತ ಗೊಳಿಸಿದ ಏಜಂಟನು ಉಮೇದುವಾರಿಕೆಯನ್ನು ಹಿಂಪಡೆಯುವ ಸಂದರ್ಭದಲ್ಲಿ ಚುನಾವಣಾಧಿಕಾರಿಗಳ ಕಛೇರಿಯನ್ನು ಪ್ರವೇಶಿಸುವ ಮುಂಚೆ, ತಮ್ಮ ಕೈಗಳನ್ನು ಸ್ಯಾನಿಟೈಸರ್‌ನಿಂದ ಶುಚಿಗೊಳಿಸಿಕೊಂಡಿದ್ದು ಮುಖಕ್ಕೆ ಫೇಸ್ ಮಾಸ್ಕ್ ಧರಿಸತಕ್ಕದ್ದಾಗಿರುತ್ತದೆ. ಸೋಂಕಿತ ಅಭ್ಯರ್ಥಿಯು ಅವನ ಸೂಚಕ ಅಥವಾ ಅವನ ಚುನಾವಣಾ ಏಜಂಟನಮೂಲಕ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೋಟೀಸನ್ನು ನೀಡಬಹುದು.

7. **ಚುನಾವಣಾ ಚಿಹ್ನೆಗಳ ಹಂಚಿಕೆ:** ಕ್ಷೇತ್ರವಾರು ಅಂತಿಮ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ, ಅವರಿಗೆ ಚುನಾವಣಾ ಚಿಹ್ನೆಯನ್ನು ಹಂಚಿಕೆ ಮಾಡುವುದು. ಈ ಸಂದರ್ಭದಲ್ಲಿ ಆಯಾ ಕ್ಷೇತ್ರದ ಅಭ್ಯರ್ಥಿಗಳು ಮಾತ್ರ ಹಾಜರಿರುವಂತೆ ನೋಡಿಕೊಳ್ಳುವುದು. ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಕ್ರಮವಾಗಿ ಒಬ್ಬೊಬ್ಬರನ್ನೇ ಕರೆದು ಅವರಿಗೆ ನಿಯಮವನ್ನನುಸರಿಸಿ ಚುನಾವಣಾ ಚಿಹ್ನೆಯನ್ನು ಹಂಚಿಕೆಮಾಡುವುದು. ಹೆಚ್ಚಿನ ಅಭ್ಯರ್ಥಿಗಳು ಒಂದೇ ಚಿಹ್ನೆಯನ್ನು ಕೋರಿರುವ ಸಂದರ್ಭದಲ್ಲಿ ಲಾಟರಿ ಮೂಲಕ ಚಿಹ್ನೆಯನ್ನು ಹಂಚಿಕೆ ಮಾಡಬೇಕಾಗಿರುವುದರಿಂದ, ಇಂತಹ ಎಲ್ಲಾ ಅಭ್ಯರ್ಥಿಯನ್ನು ಕರೆದು ಚಿಹ್ನೆಯನ್ನು ಹಂಚಿಕೆ ಮಾಡಬಹುದಾಗಿರುತ್ತದೆ. ಕೊಠಡಿಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು.

8. **ಅಭ್ಯರ್ಥಿಗಳ ಚುನಾವಣಾ ಪ್ರಚಾರ:**

   1) ಗ್ರಾಮ ಪಂಚಾಯಿತಿ ಚುನಾವಣೆಯು ಪಕ್ಷರಹಿತ ಚುನಾವಣೆಯಾಗಿರುವುದರಿಂದ, ಹಾಗೂ ಕ್ಷೇತ್ರದ ವ್ಯಾಪ್ತಿ ಬಹಳ ಚಿಕ್ಕದಿರುವುದರಿಂದ, ಅಭ್ಯರ್ಥಿಗಳ ಪ್ರಚಾರವು ಕ್ಷೇತ್ರಕ್ಕೆ ಸೀಮಿತವಾಗಿರುತ್ತದೆ. ಕಡಿಮೆ (ಗರಿಷ್ಟ-5 ಜನ) ಬೆಂಬಲಿಗರೊಂದಿಗೆ ಸಾಮಾಜಿಕ ಅಂತರ ಕಾಯ್ದುಕೊಂಡು ಮನೆ ಮನೆಗೆ ಬೇಟಿ ನೀಡಿ ಪ್ರಚಾರ ಮಾಡಬಹುದಾಗಿರುತ್ತದೆ. ಪ್ರಚಾರದ ಸಂದರ್ಭದಲ್ಲಿ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಫೇಸ್‌ಮಾಸ್ಕ್ ಧರಿಸಿರಬೇಕು. ಆದಷ್ಟು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಪ್ರಚಾರ ಮಾಡಬಹುದು. (ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಪಕ್ಷಸಹಿತ ಚುನಾವಣೆ ಆದ್ದರಿಂದ, ಈ ಬಗ್ಗೆ ಆ ಸಂದರ್ಭದಲ್ಲಿ ಪ್ರತ್ಯೇಕ ಸೂಚನೆಗಳನ್ನು ನೀಡಲಾಗುವುದು.)
   2) ಅಭ್ಯರ್ಥಿಗಳು ಪ್ರಚಾರಕ್ಕಾಗಿ ನಿಯಮಾನುಸಾರ ಮುದ್ರಿಸಿದ ಕರಪತ್ರಗಳನ್ನು ಹಂಚಬಹುದು. ಹಂಚುವವರು ಖಡ್ಡಾಯವಾಗಿ ಫೇಸ್ ಮಾಸ್ಕ್, ಹ್ಯಾಂಡ್ ಗ್ಲೌಸ್ ಧರಿಸಿರಬೇಕು ಹಾಗೂ ಹ್ಯಾಂಡ್ ಸ್ಯಾನಿಟೈಸರ್ ಉಪಯೋಗಿಸಬೇಕು.
   3) ಕೋವಿಡ್-19 ಹಿನ್ನೆಲೆಯಲ್ಲಿ ಗುಂಪು-ಗುಂಪಾಗಿ ಪ್ರಚಾರ ಮಾಡುವಂತಿಲ್ಲ.
   4) ಕೋವಿಡ್-19 ಪಾಸಿಟೀವ್ ಇರುವ ಅಭ್ಯರ್ಥಿಗಳು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಪ್ರಚಾರ ಮಾಡಬಹುದಾಗಿದೆ. ಖುದ್ದಾಗಿ ಸಾಮಾನ್ಯ ಜನರೊಂದಿಗೆ / ಸಮುದಾಯದಲ್ಲಿ ಪ್ರಚಾರ ಮಾಡಲು ಅವಕಾಶವಿಲ್ಲ.
   5) ಸಭೆ/ಸಮಾರಂಭವನ್ನು ತಮ್ಮ ಕ್ಷೇತ್ರಗಳಲ್ಲಿ ಕೋವಿಡ್-19 ನಿಯಂತ್ರಣ ಮಾರ್ಗಸೂಚಿಗಳನ್ನು ಅನುಸರಿಸಿ ನಡೆಸಬಹುದಾಗಿರುತ್ತದೆ.

9. **ಮತದಾನಕ್ಕೆ ಮತ ಕೇಂದ್ರದ ಸಿದ್ದತೆ:**
   1) ಕೊವಿಡ್-19 ಹಿನ್ನೆಲೆಯಲ್ಲಿ ಮತಗಟ್ಟೆಯನ್ನು 1400 ಮತದಾರರಿಗೆ ಬದಲಿಗೆ ಗರಿಷ್ಟ 1000 ಮತದಾರರಿಗೆ ಮಾತ್ರ ಇರುವಂತೆ ಮತಗಟ್ಟೆಗಳನ್ನು ಗುರುತಿಸುವುದು.
   2) ಮತದಾನಕ್ಕೆ ನಿಗಧಿ ಪಡಿಸಿದ ಕೊಠಡಿಯನ್ನು ಹಾಗೂ ಅಕ್ಕಪಕ್ಕದ ಕೊಠಡಿಗಳನ್ನು 1% ಸೋಡಿಯಂ ಹೈಪೋಕ್ಲೋರೈಡ್ ದ್ರಾವಣವನ್ನು ಸಿಂಪಡಿಸಿ ಸಿದ್ಧಗೊಳಿಸುವುದು.
   3) ಮತಗಟ್ಟೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿ, ಪೋಲಿಂಗ್ ಅಧಿಕಾರಿ ಹಾಗೂ ಪೋಲಿಂಗ್ ಏಜಂಟರುಗಳು ಕೂರುವ ಆಸನಗಳನ್ನು ಹಾಗೂ ಮೇಜುಗಳನ್ನು ನಿಯಮದಂತೆ ಜೋಡಿಸಿಡಬೇಕು. ಹಾಗೂ ಮತಪೆಟ್ಟಿಗೆಯನ್ನು ಇರಿಸುವ ಸ್ಥಳದಲ್ಲಿ ಟೇಬಲ್ಲನ್ನು ಅಳವಡಿಸಿ ಮತದಾನದ ಗೌಪ್ಯತೆಯನ್ನು ಕಾಪಾಡಲು ಮರೆಮಾಚುವ ಕಾರ್ಡಬೋರ್ಡ್‌ನ್ನು ಕಂದಾಯ ಇಲಾಖಾ ಸಿಬ್ಬಂದಿಗಳ ಮೂಲಕ ಮೊದಲೇ ಸಿದ್ದಪಡಿಸಿಟ್ಟು ಕೊಠಡಿಯನ್ನು ಸ್ಯಾನಿಟೈಸ್ ಮಾಡಿ ಸೀಲ್ ಮಾಡುವುದು.

4) ಮಸ್ಟರಿಂಗ್ ದಿನ ಸಂಜೆ ಮತದಾನ ಸಿಬ್ಬಂದಿಗೆ ಉಳಿದುಕೊಳ್ಳಲು ಸ್ಯಾನಿಟೈಸ್ ಮಾಡಿದ ಪಕ್ಕದ ಕೊಠಡಿಗಳನ್ನು ನೀಡುವುದು.
5) ಮತಕೇಂದ್ರದ 200 ಮೀಟರ್ ಅಂತರದಲ್ಲಿ ಅಭ್ಯರ್ಥಿಗಳು, ಮತದಾರರಿಗೆ 'ಗುರುತು ಚೀಟಿ' ನೀಡಲು ಸಾಮಾಜಿಕ ಅಂತರ ಕಾಯ್ದುಕೊಂಡು ಟೇಬಲ್‌ಗಳನ್ನು ಹಾಕಿಕೊಳ್ಳಲು ಜಾಗವನ್ನು ಗುರುತಿಸುವುದು. 'ಗುರುತು ಚೀಟಿ' ಯನ್ನು ನೀಡುವ ಸಂದರ್ಭದಲ್ಲಿ ಮತದಾರರನ್ನು ಗುಂಪುಗೂಡಿಸದೇ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಿತರಿಸುವುದು. 'ಗುರುತು ಚೀಟಿ' ವಿತರಿಸುವವರು ಖಡ್ಡಾಯವಾಗಿ ಕೋವಿಡ್-19 ಸುರಕ್ಷಾ ಕ್ರಮಗಳನ್ನು ಅನುಸರಿಸುವುದು.

10. ಮತಗಟ್ಟೆ ಅಧಿಕಾರಿಗಳ ನೇಮಕ ಮತ್ತು ತರಬೇತಿ:
1) ಆಯೋಗದ ನಿರ್ದೇಶನದಂತೆ ಆಯಾ ತಾಲ್ಲೂಕಿನ ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಮತಗಟ್ಟೆ ಅಧಿಕಾರಿಗಳನ್ನಾಗಿ ನೇಮಕ ಮಾಡುವುದು.
2) ತರಬೇತಿ ಸಂದರ್ಭದಲ್ಲಿ ಮತ್ತು ಮಸ್ಟರಿಂಗ್ ಸಂದರ್ಭದಲ್ಲಿ ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತೆ ನೇಮಕ ಮಾಡಲಾದ ಮತಗಟ್ಟೆ ಅಧಿಕಾರಿಗಳಿಗೆ ಪ್ರತ್ಯೇಕ ಗುರತಿನ ಸಂಖ್ಯೆಯನ್ನು (ID No.) ನೀಡುವುದು.
3) ಸಾಮಾಜಿಕ ಅಂತರ ಕಾಯ್ದುಕೊಂಡು ಅವರಿಗೆ ಆಯಾ ತಾಲ್ಲೂಕಿನಲ್ಲಿ ತರಬೇತಿ ನೀಡುವುದು.
4) ಸಾಧ್ಯವಾದಷ್ಟು 'E-Training' ಮೂಲಕ ಅಥವಾ 'Webinar App' ಮೂಲಕ ತರಬೇತಿ ನೀಡಬಹುದು. ಮತಗಟ್ಟೆ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಲ್ಲಿ 50-100 ಸಂಖ್ಯೆಗೆ ಮಿತಗೊಳಿಸಿ ತಂಡಗಳನ್ನು ರಚಿಸಿ ತರಬೇತಿ ನೀಡುವುದು. ಮೇಲೆ ತಿಳಿಸಿರುವಂತೆ ಕೋವಿಡ್-19 ಮುನ್ನೆಚ್ಚರಿಕೆ ಕ್ರಮಗಳುನ್ನು ಅನುಸರಿಸುವುದು.

11. ಮಸ್ಟರಿಂಗ್ ಕಾರ್ಯದ ಸಿದ್ಧತೆ:
1) ಮತದಾನದ ಮುಂಚಿನ ದಿನ ಮಸ್ಟರಿಂಗ್ ಮಾಡುವುದರಿಂದ ಎಲ್ಲಾ ಸಿದ್ಧತೆಗಳನ್ನು ಮುಂಚಿತವಾಗಿಯೆ ತಯಾರಿ ಮಾಡಿಕೊಳ್ಳುವುದು. ಮತಗಟ್ಟೆ ಅಧಿಕಾರಿಗಳನ್ನು ಸಂಬಂಧಪಟ್ಟ ಮತಗಟ್ಟೆಗಳಿಗೆ ತಲುಪಿಸಲು ರೂಟ್ ಮ್ಯಾಪ್‌ಗಳನ್ನು ಸಿದ್ಧಪಡಿಸಿಕೊಳ್ಳುವುದು. ರೂಟ್ ಮ್ಯಾಪ್ ತಯಾರಿಸುವ ಸಂದರ್ಭದಲ್ಲಿ ಯಾವ ವಾಹನದಲ್ಲಿ ಎಷ್ಟು ಸಂಖ್ಯೆಯಲ್ಲಿ ಮಾತ್ರ ಸಾಗಿಸಬಹುದು ಎಂಬುದನ್ನು ಗಮನದಲ್ಲಿಸಿಕೊಂಡು ತಯಾರಿಸುವುದು.
2) ಮಸ್ಟರಿಂಗ್ ದಿನದಂದು ಅಧಿಕಾರಿ ಸಿಬ್ಬಂದಿಗಳು ಮತ್ತು ಎಲ್ಲಾ ಮತಗಟ್ಟೆಯ ಅಧಿಕಾರಿಗಳು ಒಂದೆಡೆ ಸೇರುವುದನ್ನು ತಪ್ಪಿಸಲು ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ಅನುಕೂಲಕ್ಕೆ ತಕ್ಕಂತೆ, ಬೇರೆ ಬೇರೆ ಸ್ಥಳದಲ್ಲಿ ಮಸ್ಟರಿಂಗ್ ಸೆಂಟರ್‌ಗಳನ್ನು ಗೊತ್ತುಪಡಿಸುವುದು.
3) ಯಾವ ಮಸ್ಟರಿಂಗ್ ಕೇಂದ್ರದಲ್ಲಿ ಯಾವ ರೂಟ್ ಮತಗಟ್ಟೆಗಳು ಬರುತ್ತದೆ ಎಂಬ ಬಗ್ಗೆ ಲಿಖಿತ ನೋಟೀಸ್‌ಗಳನ್ನು ಪ್ರದರ್ಶಿಸುವುದು.
4) ಮತಗಟ್ಟೆ ಅಧಿಕಾರಿಗಳಿಗೆ ಮುಂಚಿತವಾಗಿ ಯಾವ ಮಸ್ಟರಿಂಗ್ ಕೇಂದ್ರದಲ್ಲಿ ಹಾಜರಾಗಬೇಕು ಎಂಬ ಬಗ್ಗೆ ತಿಳಿಸಿದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಂದೆಡೆ ಸೇರುವುದನ್ನು ಹಾಗೂ ಗೊಂದಲಗಳನ್ನು ತಪ್ಪಿಸಬಹುದು.

12. ಮಸ್ಟರಿಂಗ್:
1) ಮಸ್ಟರಿಂಗ್ ದಿನದಂದು ಮತಗಟ್ಟೆ ಅಧಿಕಾರಿಗಳು ನಿಗದಿಪಡಿಸಿರುವ ಮಸ್ಟರಿಂಗ್ ಕೇಂದ್ರದಲ್ಲಿ ಹಾಜರಾಗುವುದು. ಪ್ರತಿಯೊಬ್ಬರೂ ಫೇಸ್ ಮಾಸ್ಕ್ ಧರಿಸಿರತಕ್ಕದ್ದು.

2) ಮತಗಟ್ಟೆ ಅಧಿಕಾರಿಗಳು ಮಸ್ಟರಿಂಗ್ ಕೇಂದ್ರಕ್ಕೆ ಪ್ರವೇಶಿಸುವ ಮುನ್ನ ಥರ್ಮಲ್ ಜ್ವರ ತಪಾಸಣೆ ಮಾಡುವುದು. ಕೈಗಳನ್ನು ಸೆನಿಟೈಸರ್ ಮೂಲಕ ಶುಚಿಗೊಳಿಸಿಕೊಳ್ಳುವುದು. ಕೋವಿಡ್-19 ಲಕ್ಷಣಗಳು ಇರುವುದಿಲ್ಲವೆಂದು ಖಚಿತಪಡಿಸಿಕೊಂಡು ಒಳಪ್ರವೇಶಿಸಲು ಅನುಮತಿಸುವುದು. ಇದಕ್ಕೆ ಆರೋಗ್ಯ ಇಲಾಖೆಯ ಸಹಕಾರವನ್ನು ಪಡೆದುಕೊಳ್ಳಬಹುದು.
3) ಮತಗಟ್ಟೆ ಅಧಿಕಾರಿಗಳಿಗೆ ಸ್ಯಾನಿಟೈಸರ್, ಫೇಸ್ ಮಾಸ್ಕ್ ಮತ್ತು ಹ್ಯಾಂಡ್ ಗ್ಲೌಸ್ (3-4 ಫೇಸ್ ಮಾಸ್ಕ್, ಫೇಸ್ ಶೀಲ್ಡ್ ಮತ್ತು ಒಂದು ಜೊತೆ ಹ್ಯಾಡ್ ಗ್ಲೌಸ್)ಗಳ ಒಂದು ಕಿಟ್ ವಿತರಿಸುವುದು.
4) ಮತಗಟ್ಟೆ ಸಾಮಗ್ರಿಗಳನ್ನು ವಿತರಿಸುವ ಸಂದರ್ಭದಲ್ಲಿ ಸಾಮಾಜಿಕ ಅಂತರವನ್ನು ಖಡ್ಡಾಯವಾಗಿ ಕಾಯ್ದುಕೊಳ್ಳುವುದು.
5) ಯಾವುದೇ ವಾಹನದಲ್ಲಿ ನಿಗದಿಪಡಿಸಿರುವ ಸಂಖ್ಯೆಯಷ್ಟು ಮಾತ್ರ ಮತಗಟ್ಟೆ ಸಿಬ್ಬಂದಿಯನ್ನು ಕಳುಹಿಸಿಕೊಡುವುದು.

13. ಮತದಾನದ ದಿನ ಮತದಾನದ ಪ್ರಕ್ರಿಯೆ:

1) ಮತಗಟ್ಟೆ ಅಧಿಕಾರಿಗಳು ಹಾಗೂ ಪೋಲಿಂಗ್ ಏಜೆಂಟರು: ಮತದಾನದ ದಿನದಂದು, ಮತಗಟ್ಟೆ ಅಧಿಕಾರಿಗಳು ಖಡ್ಡಾಯವಾಗಿ ಫೇಸ್ ಮಾಸ್ಕ / ಫೇಶ್ ಶೀಲ್ಡ ಮತ್ತು ಹ್ಯಾಂಡ್‌ಗ್ಲೌಸ್ ಧರಿಸಿರಬೇಕು. ಕೋವಿಡ್-19 ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು.
2) ಮತದಾರರು: ಮತದಾರರು ಮತಚಲಾಯಿಸುವ ಸಂದರ್ಭದಲ್ಲಿ ಖಡ್ಡಾಯವಾಗಿ ಫೇಸ್ ಮಾಸ್ಕ ಧರಿಸಿರಬೇಕು. ಹಾಗೂ ಸರತಿಯ ಸಾಲಿನಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು.
3) ಪ್ರತಿಯೊಂದು ಮತಕೇಂದ್ರದ ಪ್ರವೇಶದ್ವಾರದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳನ್ನು ನಿಯೋಜಿಸಿ, ಮತದಾನ ಕೊಠಡಿಗೆ ಪ್ರವೇಶಿಸುವ ವ್ಯಕ್ತಿಗಳನ್ನು (ಮತಗಟ್ಟೆ ಸಿಬ್ಬಂದಿ ಹಾಗೂ ಏಜಂಟರನ್ನು ಒಳಗೊಂಡಂತೆ) ಕೋವಿಡ್-19 ಥರ್ಮಲ್ ಜ್ವರ ತಪಾಸಣೆ ಮಾಡುವುದು ಹಾಗೂ ಒಳಪ್ರವೇಶಿಸುವ ವ್ಯಕ್ತಿಗಳು ಮಾಸ್ಕ ಅನ್ನು ಧರಿಸಿರುವುದನ್ನು ಹಾಗೂ ಪ್ರತಿಯೊಬ್ಬರೂ ಸ್ಯಾನಿಟೈಸರ್ ಬಳಸಿ ಕೈಗಳನ್ನು ಶುಚಿಗೊಳಿಸಿಕೊಳ್ಳುವುದನ್ನು ಖಚಿತ ಪಡಿಸಿಕೊಳ್ಳಬೇಕು. ಕೋವಿಡ್-19 ಲಕ್ಷಣಗಳು ಕಂಡುಬಂದ ವ್ಯಕ್ತಿಗಳನ್ನು ಕೂಡಲೇ ಪ್ರತ್ಯೇಕಿಸಿ, ಹೆಚ್ಚಿನ ತಪಾಸಣೆಗೆ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡುವ ಕ್ರಮಗಳನ್ನು ಕೈಗೊಳ್ಳುವುದು. ಇದಕ್ಕೆ ಪ್ರತ್ಯೇಕ ಟೀಂ ವ್ಯವಸ್ಥೆ ಮಾಡಿದಲ್ಲಿ ಮತದಾನ ಪ್ರಕ್ರಿಯೆಗೆ ಅಡೆತಡೆ ಉಂಟಾಗಲಾರದು.
4) ಮತಗಟ್ಟೆ ಏಜಂಟರುಗಳು ನಿಗದಿತ ಸಮಯದೊಳಗೆ ಕೊಠಡಿಯಲ್ಲಿ ಹಾಜರಿದ್ದು ತಮಗೆ ಮೀಸಲಿರಿಸಿದ ಆಸನದಲ್ಲಿ ಆಸೀನರಾಗಬೇಕು.
5) ಪ್ರಿಸೈಡಿಂಗ್ ಅಧಿಕಾರಿಯು ನಿಯಮಾನುಸಾರ ಮತಪೆಟ್ಟಿಗೆಯು ಖಾಲಿ ಇರುವುದನ್ನು ಹಾಜರಿರುವ ಏಜಂಟರಿಗೆ ಇರುವ ಸ್ಥಳದಿಂದಲೇ ಪ್ರದರ್ಶಿಸಿ, ಅಗತ್ಯ ಪೇಪರ್ ಸೀಲ್ ಮಾಡುವ ಕ್ರಮ ಅನುಸರಿಸುವುದು. ಯಾವುದೇ ಸಂದರ್ಭದಲ್ಲಿಯೂ ಗುಂಪುಗೂಡಲು ಅವಕಾಶ ನೀಡದೆ ಅಂತರವನ್ನು ಕಾಯ್ದುಕೊಳ್ಳುವುದು. ನಿಗದಿಪಡಿಸಿದ ಸಮಯದಲ್ಲಿ ಮತದಾನ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.

14. ಮತದಾರನ ಪ್ರವೇಶ ಹಾಗೂ ಮತ ಚಲಾವಣೆ:

1) ಪ್ರತಿಯೊಬ್ಬ ಮತದಾರನು ಕೊಠಡಿಗೆ ಪ್ರವೇಶಿಸುವ ಮುಂಚಿತವಾಗಿ ಕೋವಿಡ್-19 ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಬೇಕು.
2) ಸಂಬಂದಪಟ್ಟ ಮತದಾನ ಕೇಂದ್ರದ ಮಹಿಳಾ ಮತದಾರರಿಗೆ ಮತ್ತು ಪುರುಷ ಮತದಾರರಿಗೆ ಪ್ರತ್ಯೇಕ ಸರತಿ ಸಾಲುಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಂಡು ನಿಲ್ಲಿಸುವುದು.
3) ಮತದಾರನ ಗುರುತನ್ನು ಪರಿಶೀಲಿಸಿದ ನಂತರ ಅವನು ತಂದಿರುವ ಗುರುತಿನ ಚೀಟಿಯನ್ನು ಅದಕ್ಕಾಗಿ ಇಟ್ಟಿರುವ ಡಬ್ಬದಲ್ಲಿ ಹಾಕುವಂತೆ ತಿಳಿಸುವುದು.

4) ಸೋಂಕಿತ ವ್ಯಕ್ತಿಗಳಿಗೂ ಮತ ಚಲಾಯಿಸಲು ಹಕ್ಕುಳ್ಳವರಾಗಿದ್ದು ಇವರಿಗೆ ಅಂಚೆ ಮತಪತ್ರವನ್ನು ನೀಡುವ ಬಗ್ಗೆ ರಾಜ್ಯ ಚುನಾವಣಾ ಆಯೋಗದಿಂದ ಪ್ರತ್ಯೇಕ ಆದೇಶ/ಮಾರ್ಗಸೂಚಿಯನ್ನು ನೀಡಲಾಗುವುದು.
5) ಅಳಿಸಾಗದ ಶಾಯಿ (ಇಂಡೆಲಿಬಲ್ ಇಂಕ್) ಹಾಕುವುದು: ಪೋಲಿಂಗ್ ಅಧಿಕಾರಿಯು ಮತದಾರನ ಅಂಗೈಯನ್ನು ನಿಗದಿಪಡಿಸಿದ ಸ್ಥಳದಲ್ಲಿ ಇರಿಸುವಂತೆ ತಿಳಿಸಿ, ಮತದಾರನ ಕೈಯನ್ನು ಮುಟ್ಟದೆ, ಜಾಗರೂಕತೆಯಿಂದ ಶಾಯಿಯನ್ನು ಹಾಕುವುದು. ಒಂದುವೇಳೆ ಮತದಾರನು ಹ್ಯಾಂಡ್ ಗ್ಲೌಸ್ ಅನ್ನು ಧರಿಸಿ ಬಂದಿದ್ದಲ್ಲಿ ಅದನ್ನು ತೆಗೆದು ನಿಗದಿಪಡಿಸಿದ ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕುವುದು.
6) ಮತಪತ್ರ ವಿತರಿಸುವುದು: ಮತಪತ್ರವನ್ನು ವಿತರಿಸುವ ಪೋಲಿಂಗ್ ಅಧಿಕಾರಿಯು ಮತದಾರನಿಗೆ ಮತಪತ್ರವನ್ನು ವಿತರಿಸುವುದು. ನಂತರ ನಿಯಮದಂತೆ ಮತಪತ್ರದ ಕೌಂಟರ್ ಫೈಲ್‌ನಲ್ಲಿ ಸಹಿ ಅಥವಾ ಹೆಬ್ಬೆರಳಿನ ಗುರುತು ಪಡೆಯಬೇಕು.
7) ಮತಪತ್ರವನ್ನು ಗುರುತು ಮಾಡುವ ಟೇಬಲ್‌ನಲ್ಲಿ ಮತಪತ್ರದಲ್ಲಿ ಮತವನ್ನು ಗುರುತು ಮಾಡಿದನಂತರ ಮತಪೆಟ್ಟಿಗೆಯಲ್ಲಿ ಮತವನ್ನು ಹಾಕಬೇಕು. ಮತಪೆಟ್ಟಿಗೆಯನ್ನು ಮತದಾರರು ಮುಟ್ಟಲು ಅವಕಾಶ ನೀಡಬಾರದು. ಪ್ರಿಸೈಡಿಂಗ್ ಅಧಿಕಾರಿಗಳು ಅವಶ್ಯವಿದ್ದಲ್ಲಿ ತಮಗೆ ಒದಗಿಸಿರುವ ಸ್ಯಾನಿಟೈಸ್ ಮಾಡಿರುವ ಬಿದಿರಿನ ಕಡ್ಡಿಯಲ್ಲಿ ಮತಪತ್ರವು ಸಿಕ್ಕಿಹಾಕಿಕೊಳ್ಳದಂತೆ ಸರಿಪಡಿಸಬಹುದು.
8) ಮತದಾನದ ಮುಕ್ತಾಯ: ಮತದಾನವು ಮುಕ್ತಾಯವಾದ ಕೂಡಲೇ ಮತಪೆಟ್ಟಿಗೆಯನ್ನು ಸೀಲ್‌ಮಾಡಿ ಅಗತ್ಯ ದಾಖಲಾತಿಗಳನ್ನು ಸಿದ್ಧಪಡಿಸಿಕೊಂಡು, ನಿಗದಿಪಡಿಸಿದ ವಾಹನದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಭದ್ರತಾ ಕೊಠಡಿಗೆ ಕೊಂಡೊಯ್ಯುವುದು.

15. ಡಿ–ಮಸ್ಟ್‌ರಿಂಗ್ ಕೇಂದ್ರ, ಭದ್ರತಾ ಕೊಠಡಿ ಮತ್ತು ಎಣಿಕಾ ಕೇಂದ್ರದ ಸ್ಥಾಪನೆ:
1) ಸರ್ಕಾರಿ ಕಛೇರಿ, ಸಮುದಾಯ ಭವನ, ಅಥವಾ ಶಾಲಾ ಕಟ್ಟಡ ಇತ್ಯಾದಿ ಸ್ಥಳಪರಿಶೀಲನೆ ಮಾಡಿ, ಡಿ–ಮಸ್ಟ್‌ರಿಂಗ್ ಕಾರ್ಯಕ್ಕೆ, ಭದ್ರತಾ ಕೊಠಡಿಗೆ ಮತ್ತು ಮತಪತ್ರಗಳ ಎಣಿಕೆಗೆ ಸ್ಥಳಾವಕಾಶವನ್ನು ಗಮನದಲ್ಲಿರಿಸಿಕೊಂಡು ಸೂಕ್ತ ಕಟ್ಟಡವನ್ನು ಎಣಿಕೆ ಕೇಂದ್ರಕ್ಕಾಗಿ ಗುರುತಿಸುವುದು.
2) ಡಿ–ಮಸ್ಟ್‌ರಿಂಗ್ ಸಂದರ್ಭದಲ್ಲಿ ಅಧಿಕಾರಿ ಸಿಬ್ಬಂದಿಗಳು ಮತ್ತು ಎಲ್ಲಾ ಮತಗಟ್ಟೆಯ ಅಧಿಕಾರಿಗಳು ಮತಗಳ ಎಣಿಕೆ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಣಿಕೆ ಸಿಬ್ಬಂದಿಗಳು, ಸ್ಪರ್ಧಿಸಿರುವ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜಂಟರು ಒಂದೆಡೆ ಸೇರುವುದನ್ನು ತಪ್ಪಿಸಲು ತಾಲ್ಲೂಕು ಕೇಂದ್ರದಲ್ಲಿ ಸಾಧ್ಯವಾದಷ್ಟು ಬೇರೆ ಬೇರೆ ಸ್ಥಳಗಳಲ್ಲಿ ಎಣಿಕಾ ಕೇಂದ್ರಗಳನ್ನು ಗೊತ್ತುಪಡಿಸುವುದು.
3) ಭದ್ರತಾ ಕೊಠಡಿಯನ್ನು ಮತಚಲಾಯಿಸಲಾದ, ಸೀಲ್ ಮಾಡಿದ ಮತಪೆಟ್ಟಿಗೆಗಳನ್ನು ಮತ್ತು ದಾಖಲಾತಿಗಳನ್ನು ಇಡುವ ಮುನ್ನ ಮತ್ತು ಇಟ್ಟ ನಂತರ Disinfect ಮಾಡಿ ಭದ್ರತಾ ಕೊಠಡಿಯನ್ನು ಸೀಲ್ ಮಾಡುವುದು. Disinfect ಮಾಡುವ ಸಂದರ್ಭದಲ್ಲಿ ಮತಪೆಟ್ಟಿಗೆಯೊಳಗೆ ಮತ್ತು ದಾಖಲಾತಿಗಳಿಗೆ ಯಾವುದೇ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು.

16. ಡಿ–ಮಸ್ಟರಿಂಗ್:.
1) ಡಿ–ಮಸ್ಟರಿಂಗ್ ಕೇಂದ್ರದಲ್ಲಿ ಗೊಂದಲ ಉಂಟಾಗದಂತೆ, ಗುಂಪುಗೂಡಲು ಅವಕಾಶವಿಲ್ಲದಂತೆ ಸಮಾಜಿಕ ಅಂತರ ಕಾಯ್ದುಕೊಂಡು ಒಪ್ಪಿಸಲು ಸೂಕ್ತ ವ್ಯವಸ್ಥೆ ಮಾಡುವುದು.
2) ಡಿ–ಮಸ್ಟ್‌ರಿಂಗ್ ಸಿಬ್ಬಂದಿಗಳು ಮತ್ತು ಮತಗಟ್ಟೆ ಅಧಿಕಾರಿಗಳು ಖಡ್ಡಾಯವಾಗಿ ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್ ಧರಿಸಿರಬೇಕು.

17. ಎಣಿಕಾ ಕೇಂದ್ರದ ಸಿದ್ಧತೆ:

1) ಮತಗಳ ಎಣಿಕೆಗಾಗಿ ಗೊತ್ತುಪಡಿಸಿದ ಕೊಠಡಿಗಳನ್ನು ಮುಂಚಿನ ದಿನವೇ Disinfect ಎಣಿಕೆಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ಕೊಠಡಿಯನ್ನು ಸೀಲ್ ಮಾಡುವುದು.
2) ಎಣಿಕೆಯ ಸಂದರ್ಭದಲ್ಲಿ ಆಯಾ ಕ್ಷೇತ್ರದ ಅಭ್ಯರ್ಥಿ ಅಥವಾ ಅವನ ಏಜಂಟನಿಗೆ ಮಾತ್ರ ಕುಳಿತುಕೊಳ್ಳಲು ಅವಕಾಶ ಮಾಡುವುದು. ಅಭ್ಯರ್ಥಿ ಅಥವಾ ಏಜಂಟರು ಮತಪತ್ರಗಳನ್ನು ಮುಟ್ಟಲಾರದಂತೆ ಅಗತ್ಯ ಬ್ಯಾರಿಕೇಡ್‌ಗಳನ್ನು ಹಾಕುವುದು.
3) ಕೋವಿಡ್-19 ಮಾರ್ಗಸೂಚಿಗಳನ್ನು ಅನುಸರಿಸಿ ಎಣಿಕೆ ಕಾರ್ಯವನ್ನು ಮಾಡುವುದು. ಎಣಿಕೆ ಬಗ್ಗೆ ಪ್ರತ್ಯೇಕ ಸೂಚನೆಗಳನ್ನು ಆಯೋಗದಿಂದ ನೀಡಲಾಗುವುದು.
4) ಎಣಿಕಾ ಕೇಂದ್ರದ ಹೊರಭಾಗದಲ್ಲಿ ಜನರು ಗುಂಪು ಗುಂಪುಗಳಾಗಿ ಒಂದು ಕಡೆ ಸೇರುವುದನ್ನು ನಿಷೇಧಿಸುವುದು.

18. ಎಣಿಕೆ ಕೇಂದ್ರದಲ್ಲಿ ಕೋವಿಡ್-19 ಬಗ್ಗೆ ಎಚ್ಚರಿಕೆ ನೋಟೀಸ್‌ಗಳನ್ನು ಪ್ರಕಟಿಸುವುದು: ಎಚ್ಚರಿಕೆ ನೋಟೀಸುಗಳನ್ನು ಎಲ್ಲರಿಗೂ ಕಾಣುವಂತೆ ಪ್ರದರ್ಶಿಸುವುದು. ನಿಯಮಗಳನ್ನು ಪಾಲಿಸದವರನ್ನು ಕೂಡಲೇ ಎಣಿಕೆ ಕೇಂದ್ರದಿಂದ ಹೊರಗೆ ಕಳುಹಿಸುವುದು. ಅಂತಹವರ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಚುನಾವಣಾಧಿಕಾರಿಗಳಿಗೆ ನೀಡಿದೆ.

19. ಎಣಿಕೆ ಕಾರ್ಯಕ್ಕೆ ಸಿಬ್ಬಂದಿಗಳ ನೇಮಕ:

1) ಸಾಕಷ್ಟು ಮುಂಚಿತವಾಗಿ ಎಣಿಕೆ ಮೇಲ್ವಿಚಾರಕರನ್ನು ಮತ್ತು ಎಣಿಕೆ ಸಹಾಯಕರನ್ನು ನೇಮಕಮಾಡಿ ಅವರಿಗೆ ತರಬೇತಿ ಕೋವಿಡ್-19 ರ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ನೀಡುವುದು.
2) ಎಣಿಕೆಯ ನಂತರದ ಸೀಲ್ ಮಾಡಲಾದ ಟ್ರಂಕ್‌ಗಳನ್ನು ಉಪ ಖಜಾನೆಯಲ್ಲಿ ಅಥವಾ ತಾಲ್ಲೂಕು ಕಛೇರಿಯ ತಹಶೀಲ್ದಾರ್ ಸುಪರ್ಧಿನಲ್ಲಿ ಭದ್ರತಾ ಕೊಠಡಿಯಲ್ಲಿ ಸುರಕ್ಷಿತವಾಗಿಡುವುದು.

20. ಲಘು ಉಪಹಾರದ ವ್ಯವಸ್ಥೆ: ಕೋವಿಡ್-19 ಎಚ್ಚರಿಕೆ ಕ್ರಮಗಳನ್ನು ಅನುಸರಿಸಿ ಎಣಿಕೆ ಕೇಂದ್ರದಲ್ಲಿ ಅಧಿಕಾರಿ ಸಿಬ್ಬಂದಿಗಳಿಗೆ ಮತ್ತು ಅಭ್ಯರ್ಥಿಗಳು ಮತ್ತು ಅವರ ಏಜಂಟರಿಗೆ ಪ್ರತ್ಯೇಕ ಉಪಹಾರ ಕೇಂದ್ರ ವ್ಯವಸ್ಥೆ ಮಾಡುವುದು. ಉಪಹಾರ ಕೇಂದ್ರದಲ್ಲಿ ಕೋವಿಡ್-19 ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ಶುಚಿತ್ವವನ್ನು ಕಾಪಾಡುವುದು.

21. ಎಣಿಕೆ ಕೇಂದ್ರದೊಳಗೆ ಪ್ರವೇಶ ಮತ್ತು ಮತಗಳ ಎಣಿಕೆ::

ಆರೋಗ್ಯ ಇಲಾಖೆಯ ಸಿಬ್ಬಂದಿಗಳನ್ನು ನೇಮಕಾತಿ ಮಾಡಿ ಎಣಿಕೆ ಕೇಂದ್ರದೊಳಗೆ ಪ್ರವೇಶಿಸುವ ಅಧಿಕಾರಿಗಳು/ಸಿಬ್ಬಂದಿಗಳನ್ನು ಥರ್ಮಲ್ ಸ್ಕ್ಯಾನ್ ಗೊಳಪಡಿಸುವುದು. ಅಧಿಕಾರಿಗಳು, ಸಿಬ್ಬಂದಿಗಳು, ಅಭ್ಯರ್ಥಿಗಳು ಮತ್ತು ಏಜಂಟರುಗಳು ಖಡ್ಡಾಯವಾಗಿ ಫೇಸ್ ಮಾಸ್ಕ ಧರಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.

ಎಣಿಕೆ ಸಂದರ್ಭದಲ್ಲಿ ಏಣಿಕೆ ಮೇಲ್ವಿಚಾರಕರು ಮತ್ತು ಎಣಿಕೆ ಸಹಾಯಕರು ಖಡ್ಡಾಯವಾಗಿ ಫೇಸ್ ಮಾಸ್ಕ್, ಫೇಸ್ ಶೀಲ್ಡ್, ಹಾಗೂ ಹ್ಯಾಂಡ್ ಗ್ಲೌಸ್‌ಗಳನ್ನು ಧರಿಸಿರಬೇಕು. ನೇರವಾಗಿ ಬರಿ ಕೈಗಳಿಂದ (ಬೇರ್ ಹ್ಯಾಂಡ್) ಗಳಿಂದ ಮತಪತ್ರಗಳನ್ನು ಮುಟ್ಟಬಾರದು.

ಕೋವಿಡ್-19 ಮಾರ್ಗಸೂಚಿಗಳನ್ನು ಅನುಸರಿಸಿ ಎಣಿಕೆ ಸಿಬ್ಬಂದಿಗಳಿಗೆ, ಅಭ್ಯರ್ಥಿಗಳಿಗೆ/ಏಜಂಟರಿಗೆ ಆಸನದ ವ್ಯವಸ್ಥೆ ಮಾಡಬೇಕು. ಅಭ್ಯರ್ಥಿಗಳು /ಏಜಂಟರು ಎಣಿಕೆ ಕೊಠಡಿಗೆ ಪ್ರವೇಶಿಸುವ ಮುನ್ನ ಫೇಸ್ ಮಾಸ್ಕ್‌ನ್ನು ಖಡ್ಡಾಯವಾಗಿ ಧರಿಸಿರಬೇಕು.

1) ವಿಜೇತ ಅಭ್ಯರ್ಥಿಗಳಿಗೆ ದೃಢೀಕರಣ ಪತ್ರವನ್ನು ನೀಡುವಾಗ ಹಸ್ತಲಾಘವ ಮಾಡುವಂತಿಲ್ಲ.
2) ಗುಂಪುಗಳಲ್ಲಿ/ ಮೆರವಣಿಗಳ ಮುಖೇನ ವಿಜೇತ ಅಭ್ಯರ್ಥಿಗಳ ವಿಜಯೋತ್ಸವವನ್ನು ಆಚರಿಸುವಂತಿಲ್ಲ.

22. ಚುನಾವಣೆಗೆ ಎಲೆಕ್ಟ್ರಾನಿಕ್ ಮತ ಯಂತ್ರಗಳನ್ನು ಬಳಕೆ: ಚುನಾವಣೆಗೆ ಮತ ಯಂತ್ರಗಳನ್ನು ಬಳಕೆ ಮಾಡುತ್ತಿರುವ ಕಡೆಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು.

1. ಮತಯಂತ್ರಗಳನ್ನು ರ‍್ಯಾಂಡಮೈಸೇಷನ್ ಮಾಡುವ ಸಂದರ್ಭದಲ್ಲಿ ಮತಯಂತ್ರಗಳನ್ನು ದಾಸ್ತಾನು ಇಡುವ ಕೊಠಡಿಗಳನ್ನು 1% ಸೋಡಿಯಂ ಹೈಪೋಕ್ಲೋರೈಡ್ ದ್ರಾವಣವದಿಂದ ಸ್ಯಾನಿಟೈಸ್ ಮಾಡಿ ಮತಯಂತ್ರಗಳಿಗೆ ಯಾವುದೇ ಹಾನಿಯಾಗದಂತೆ ಸಂರಕ್ಷಿಸಿಡುವುದು. ಇವಿಎಂ ನಿರ್ವಹಿಸುವ ಸಿಬ್ಬಂದಿಗಳಿಗೆ ಹ್ಯಾಂಡ್ ಗ್ಲೌಸ್ ಒದಗಿಸುವುದು.
2. ಇವಿಎಂ ನಲ್ಲಿ ಕ್ಯಾಂಡಿಡೇಟ್ ಸೇಟ್ ಮಾಡುವ ಸಂದರ್ಭದಲ್ಲಿ ಹಾಜರಿರುವ ಅಧಿಕಾರಿಗಳು/ ಸಿಬ್ಬಂದಿಗಳು, ಅಭ್ಯರ್ಥಿಗಳು ಕೋವಿಡ್-19 ಮಾರ್ಗಸೂಚಿಗಳಂತೆ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಹಾಗೂ ಫೇಸ್ ಮಾಸ್ಕ್, ಹ್ಯಾಂಡ್ ಗ್ಲೌಸ್ ಧರಿಸಿರಬೇಕು.

14/09/2020

(ರಂಜಿತಾ ಎಂ.ಪಿ)
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ,
ಬೆಂಗಳೂರು

## ಅನುಬಂಧ-1

**ಕೋವಿಡ್-19 ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾಗವಹಿಸುತ್ತಿರುವ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಈ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದು.**

1. ಪರಸ್ಪರ ಮುಟ್ಟದೆ ಶುಭಾಷಯವನ್ನು ತಿಳಿಸುವುದು.
2. ದೈಹಿಕ ಅಂತರ ಕಾಯ್ದುಕೊಳ್ಳುವುದು.
3. ಮರು ಉಪಯೋಗಿಸಲ್ಪಡಬಹುದಾದ ಫೇಸ್ ಕವರ್ ಅಥವಾ ಮಾಸ್ಕ್‌ನ್ನು ಬಳಸುವುದು.
4. ಕಣ್ಣು, ಮೂಗು ಮತ್ತು ಬಾಯಿಯನ್ನು ಮುಟ್ಟುವುದನ್ನು ಆದಷ್ಟು ತಡೆಯುವುದು.
5. ಉಸಿರಾಟದ ನೈರ್ಮಲ್ಯತೆಯನ್ನು ಕಾಪಾಡುವುದು.
6. ಕೈಗಳನ್ನು ಆಗ್ಗಿಂದಾಗ್ಗೆ ಸಂಪೂರ್ಣವಾಗಿ ತೊಳೆದುಕೊಳ್ಳುವುದು.
7. ತಂಬಾಕು, ಖೈನಿ ಇತರೆ ಜಗಿಯುವುದನ್ನು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಉಗುಳವುದನ್ನು ಮಾಡಬಾರದು.
8. ಆಗ್ಗಾಗ್ಗೆ ಮುಟ್ಟಲ್ಪಡುವ ಜಾಗಗಳನ್ನು ನಿಯಮಿತವಾಗಿ ಶುಚಿಗೊಳಿಸುವುದು.
9. ಅನಗತ್ಯ ಪ್ರಯಾಣವನ್ನು ತಪ್ಪಿಸುವುದು.
10. ಯಾರೊಬ್ಬರನ್ನು ತಾರತಮ್ಯದಿಂದ ನೋಡಬಾರದು.
11. ಗುಂಪು ಗೂಡುವುದನ್ನು ನಿರಾಕರಿಸು – ರಕ್ಷಣೆಗೆ ಆಧ್ಯತೆ ನೀಡುವುದನ್ನು ಉತ್ತೇಜಿಸು.
12. ಪರಿಶೀಲಿಸದ ಹಾಗೂ ನಕಾರಾತ್ಮಕ ಮಾಹಿತಿಗಳನ್ನು ಸಾಮಾಜಿಕ ತಾಣಗಳಲ್ಲಿ ಪ್ರಸರಿಸುವಂತಿಲ್ಲ.
13. ಕೋವಿಡ್-19ರ ಬಗ್ಗೆ ಅಧಿಕೃತ ಮಾಹಿತಿ ಪಡೆಯುವುದು.
14. ಟೋಲ್ ಫ್ರೀ ರಾಷ್ಟ್ರೀಯ ದೂರವಾಣಿ ಸಂಖ್ಯೆ:1075 ಅಥವಾ ರಾಜ್ಯ ಆರೋಗ್ಯ ಸಹಾಯವಾಣಿ ಸಂಖ್ಯೆ: 104 ಹಾಗೂ ಆಪ್ತಮಿತ್ರ ಸಹಾಯಕವಾಣಿ ಸಂಖ್ಯೆ: 14410 ಯನ್ನು ಸಂಪರ್ಕಿಸಿ.
15. ಒತ್ತಡ ಮತ್ತು ಆತಂಕ ನಿವಾರಣೆಗೆ ಮಾನಸಿಕ/ಸಮಾಜಿಕ ಸಲಹೆ ಪಡೆದುಕೊಳ್ಳುವುದು.

–0–0–0–